1.10 ಪಿ.ಎಂ

ಪ್ರಕಟಣೆ

ಪೂರ್ಣ ಪ್ರಜ್ಞ ಶಾಲೆಯ ಬಗ್ಗೆ.

ಅಧ್ಯಕ್ಷರು:- ಒಂದು ಮೂರ್ನಾಲ್ಕು ದಿವಸಗಳ ಕೆಳಗೆ ಇಲ್ಲಿ ಕಲಾಪ ನಡೆಯುವ ವೇಳೆಗೆ ಪ್ರಾಥಮಿಕ ಶಾಲೆಗಳಲ್ಲಿ ಡೊನೇಷನ್ ತೆಗೆದುಕೊಳ್ಳುವ ವಿಚಾರ ಪ್ರಸ್ತಾಪಕ್ಕೆ ಬಂದಾಗ, ನಾನು ಒಂದು ಶಾಲೆಯ ಬಗ್ಗೆ ಮತ್ತು ಅದರ ಮುಖ್ಯಸ್ಥರ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದೆ. ಅದಕ್ಕೆ ನನ್ನ ಕಛೇರಿಗೆ ಅವರು ಪತ್ರಗಳನ್ನು ಬರೆದಿದ್ದಾರೆ. ನಾವ್ಯಾರೂ ಹಾಗೆ ತೆಗೆದುಕೊಳ್ಳುತ್ತಿಲ್ಲ. ಇದು ಪವಿತ್ರವಾದ ಸಂಸ್ಥೆ. ಅಷ್ಟ ಮಠಗಳಲ್ಲಿ ಒಂದು ಮಠಕ್ಕೆ ಸೋರಿದಂತಹವರು ನಡೆಸುತ್ತಿರತಕ್ಕದ್ದು ಒಂದು ಹೇಳಿ ನನಗೆ ಪತ್ರ ಬರೆದರು. ಕಾನೂನು ರೀತಿಯ ಸಾಕ್ಷಾಧಾರಗಳು ನನ್ನ ಹತ್ತಿರ ಇಲ್ಲ: ನಾನು ಹೇಳಿದ ಮಾತುಗಳನ್ನು ರುಜುವಾತು ಮಾಡಲಿಕ್ಕೆ. ಅವರ ಪ್ರತಿನಿಧಿಗಳು ಸದನದಲ್ಲಿ ಯಾರೂ ಇಲ್ಲ. ನಾನು ಸದನದಲ್ಲಿ ಆ ಮಾತನ್ನು ಹೇಳಿದಾಗ ಪ್ರತಿಯಾಗಿ ತಮ್ಮ ವಾದವನ್ನು ಮಂಡಿಸಿ, ತಮ್ಮನ್ನು ರಕ್ಷಿಸಿಕೊಳ್ಳುವುದಕ್ಕೆ ಯಾರೂ ಇಲ್ಲ. ನಾನೇ ಎಡವಿದ್ದೇನೆ ಎಂದು ನನ್ನ ಮನಸ್ಸಿಗೆ ಅನಿಸಿರುವುದರಿಂದ, ನನ್ನ ಹತ್ತಿರ ಸಾಕ್ಷಾಧಾರಗಳು ಇಲ್ಲದೇ ಇರುವುದರಿಂದ, ಸಾರ್ವಜನಿಕ ಅನಿಸಿಕೆಗಳ ಮೇಲೆ ಆಧಾರ ಪಟ್ಟು ನನ್ನ ಭಾವನೆಗಳನ್ನು ನಾನು ವ್ಯಕ್ತಪಡಿಸಿರುವುದರಿಂದ, ಸಾಕ್ಷಾಧಾರಗಳ ಕೊರತೆ ಇರುವುದರಿಂದ ನಾನು ನನ್ನ ವಿಷಾದವನ್ನು ಸಂಸ್ಥೆಯವರಿಗೆ ವ್ಯಕ್ತಪಡಿಸುತ್ತಿದ್ದೇನೆ. ಅವರು ಖಾಸಗಿಯಾಗಿ ನನಗೆ ಪತ್ರ ಬರೆದರೂ ಕೂಡ ಸದನದಲ್ಲಿ ನಾನು ಹೇಳಿದಂತಹ ಮಾತು. ಇದರಿಂದ ನನಗೆ ಆಗತಕ್ಕ ಉಪಕಾರ ಏನು ಎಂದರೆ ನಾನೂ ಅಪರಾಧಿ ಪ್ರಜ್ಞೆಯಿಂದ ನರಳುವುದಿಲ್ಲ. ಒಂದು ವೇಳೆ ಸಾಕ್ಷಾಧಾರಗಳು ಇಲ್ಲ, ನಾವು ನಮ್ಮ ಕೆಲಸವನ್ನು ಮಾಡಿದ್ದೇವೆ ಎನ್ನತಕ್ಕದ್ದು ಆದರೆ ಆ ಅಪರಾಧಿ ಪ್ರಜ್ಞೆ ಅವರನ್ನು ಕಾಡಲಿ. ನಾನು ಇದರಿಂದ ಮುಕ್ತನಾಗಿದ್ದೇನೆ. ಸದನದ ಸಮಯವನ್ನು ಅಧಿಕಾರವನ್ನು ನಾನು ಎಲ್ಲಾದರೂ ದುರುಪಯೋಗ ಮಾಡಿಕೊಂಡಿದ್ದರೆ ಅದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಇಂತಹ ಹಣ ವಸೂಲಿಗೆ ಶಾಲೆಗಳನ್ನು ಮಾಡುವವರಿಗೆ ಸಾಮಾನ್ಯವಾಗಿ ಸಾಕ್ಷ್ಯಾಧಾರಗಳು ಇರುವುದಿಲ್ಲ. ಬಹಳ ಗೋಪ್ಯವಾಗಿ ನಡೆಯತಕ್ಕಂಥ ವ್ಯವಹಾರಗಳು ಇವು.

ಅಧ್ಯಕ್ಷರು:- ಸಭಾಧ್ಯಕ್ಷನಾಗಿ ನಾನು ಹೇಳಿದ ಮಾತಿಗೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಎಂದು ಮಾತನ್ನು ಹೋಳಬೇಕು ಎಂದು ಮಾಡಿದ್ದೆ. ನಾನೇ ಸ್ವತಃ ನನ್ನ ಮಕ್ಕಳನ್ನು ಅಲ್ಲಿನ ಶಾಲೆಯಲ್ಲಿ ಓದಿಸುತ್ತಿದ್ದೆ. ನಾನೇ ನನ್ನ ಐದು ಮಕ್ಕಳನ್ನು ಕೂಡ ಅಲ್ಲೇ ಪೂರ್ಣಪ್ರಜ್ಞ ಸ್ಕೂಲಿನಲ್ಲಿ ಓದಿಸುತ್ತಿದ್ದೆ. ಈಗಲ್ಲ, 20 ವರ್ಷದ ಹಿಂದೆ ಓದಿಸುತ್ತಿದ್ದೆ. ಅಂದಿನಿಂದ ಓದಿಸಿದ್ದೇನೆ. ನನ್ನ ಹತ್ತಿರ ಯಾವುದೇ ಇಂತಹ ಸಂಸ್ಥೆಯಲ್ಲಿ ಕೇಳಿಲ್ಲ. ಬಹುಶಃ ಇದ್ದರೆ ಯಾರೋದಾನಿಗಳಿಂದ ಅವರು ತೆಗೆದುಕೊಂಡಿರಬೇಕೇ ಹೊರತಾಗಿ ನೇರವಾಗಿ ಅಡ್ಮಿಷನ್‌ಗೆ ಹೋದಾಗ ನೀವಿಷ್ಟು ಕೊಡಿ ಎಂದು ಹೇಳಿಲ್ಲ. ಏಕೆಂದರೆ ಅಲ್ಲಿರತಕ್ಕ ಕರ್ನಲ್ ಚಿಂಗಪ್ಪ ಎನ್ನುವವರು ಬಹಳ ಸ್ಟ್ರಿಕ್ಟ್ ಮಿಲಿಟರಿ ಮನುಷ್ಯ. ಅವರು ಪೇರೆಂಟ್ಸನ್ನು ಕರೆಸಿಕೊಂಡು ಅಡ್ಮಿಷನ್ ಮಾಡಿಸಿಕೊಳ್ಳುವುದು. ಮತ್ತು ಉಳಿದಂತಹವರು

ಅವರವರ ಭಕ್ತರು ಏನು ಇದ್ದಾರೆ, ಅವರ ಮೇಲೆನ ಭಕ್ತಿ ಇದ್ದವರು ಪ್ರೀತಿ ಇದ್ದವರು, ಕೇಳಿಕೊಂಡು ಮಾಡತಕ್ಕದ್ದು ಅಥವಾ ಸಹಾಯ ತೆಗೆದುಕೊಳ್ಳತಕ್ಕದ್ದು ಇರಬಹುದು. ಆದರೆ ನೇರವಾಗಿ ಹೋದಂತಹವರ ಹತ್ತಿರ ಕೇಳಿದ್ದು ಅಥವಾ ಕೊಟ್ಟಿದ್ದು ಕಂಡಿಲ್ಲ.

ಅಧ್ಯಕ್ಷರು:- ನಾನು ತಮ್ಮ ಮಾತನ್ನು ಒಪ್ಪುತ್ತೇನೆ. ನಾವು ಯಾವಾಗಲೂ ಆತ್ಮಶುದ್ಧವಾಗಿರಬೇಕಲ್ಲಾ. ನಮಗೆ ಇದರಲ್ಲಿ ಏನು ಅಂದರೆ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮ್ಮ ಐದು ಮಕ್ಕಳು ಓದಿದರು, ಪ್ರತಿ ವರ್ಷ. ಅದಕ್ಕೇ ಅವರು ಒಂದು ಸಾರಿ ಕೇಳಿದರು, ನಿಮ್ಮದೇ ಐದು ಮಕ್ಕಳಾದ ಮೇಲೆ ನಿಮ್ಮಂತಹ ನೂರು ಜನರಿಗೆ ಸ್ಕೂಲು ಮಾಡಿದ ಹಾಗೆ ಆಗುತ್ತದೆ ಎಂದು ಹೇಳಿದರು. ಅದಕ್ಕೆ ನಾನು ಹೇಳಿದೆ. ನಿಮ್ಮ ಸ್ಕೂಲ್ ಪಕ್ಕದಲ್ಲೇ ನಾನಿದ್ದಾಗ ಬೇರೆ ಕಡೆಗೆ ಹೋಗುವ ಪ್ರಶ್ನೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅಲ್ಲಿ ಬಡ ಮಕ್ಕಳಿಗೆ ಏನೂ ಸಹಾಯ ಇಲ್ಲ. ಬರೇ ದೊಡ್ಡ ದೊಡ್ಡ ಮಕ್ಕಳಿಗೆ ಇರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಹಾಗಾದರೆ ಬೇರೆ ಎಲ್ಲೋ ಕೇಳಿರಬೇಕು. ಈವನ್ ಪ್ರೈಮರಿ ಸ್ಕೂಲ್ ಅಲ್ಲಿ ಬಿಟ್ಟು ಬೇರೆ ಕಡೆ ತೆಗೆದವರ ಹತ್ತಿರವೂ ಇರಬಹುದಲ್ಲ.

ಅಧ್ಯಕ್ಷರು:- ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಇಷ್ಟೇ. My position is delicate as the Speaker of the House. I have made my position very clear . ಪತ್ರಿಕೆಯಲ್ಲಿ ಮನವಿ ಮಾಡುತ್ತೇನೆ.

ಶ್ರೀ ಜಿ.ಎ. ಶ್ರೀರಾಮರೆಡ್ಡಿ:- ವಿಷಾದ ವ್ಯಕ್ತಪಡಿಸಬೇಕು ಎಂದು ನನಗೇನೂ ಅನ್ನಿಸುವುದಿಲ್ಲ. ವಿಷಾದ ನೀವು ವ್ಯಕ್ತಪಡಿಸಬೇಕು ಎನ್ನತಕ್ಕ ಅವಶ್ಯಕತೆ ನನಗೆ ಅನ್ನಿಸುವುದಿಲ್ಲ.

ಅಧ್ಯಕ್ಷರು:- ರೆಡ್ಡಿಯವರೇ, ತಾವು ಒಂದು ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ನಾವೆಲ್ಲರೂ ಕೂಡ ಸಾಮಾನ್ಯ ಜನರು. ಕೆಲವು ಕಾರಣಗಳಿಗಾಗಿ ಇಲ್ಲಿಗೆ ಬಂದಿದ್ದೇವೆ. ಕೆಲವು ಕೆಲಸಗಳನ್ನು, ಜವಾಬ್ದಾರಿಗಳನ್ನು ನಿರ್ವಹಣೆ ಇಲ್ಲಿ ಮಾಡುತ್ತಿದ್ದೇವೆ. ನಾವು ನಾಗರೀಕರಾಗಿ ಬದುಕಬೇಕಾಗಿದ್ದರೆ, ನಾಗರೀಕ ಸಮಾಜದಲ್ಲಿರಬೇಕಾಗಿದ್ದರೆ ಕೆಲವು ನಿರ್ಬಂಧಗಳನ್ನು ನಮ್ಮ ಮೇಲೆ ನಾವು ಹಾಕಿಕೊಳ್ಳಬೇಕಾಗುತ್ತದೆ. ನಾನು ಎಡವಿದ್ದೇನೆಂದು ನನ್ನ ಮನಸ್ಸಿಗೆ ಅನ್ನಿಸಿದಾಗ ನಾನು ಒಪ್ಪಿಕೊಳ್ಳಬೇಕಾಗುತ್ತದೆ. It is not a controversial matter.

ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ):- ಅದು ರಾಂಗ್ ಸಿಗ್ನಲ್ ಹೋಗುತ್ತದೆ. ಹೇಗೆ ರಾಂಗ್ ಸಿಗ್ನಲ್ ಹೋಗುತ್ತದೆ ಎಂದರೆ ತಾವು ವಿಷಾದವನ್ನು ವ್ಯಕ್ತಿ ಪಡಿಸಿದ್ದು ಎಂದು ಬಂದಿದ್ದೇ ಆದರೆ ಅದಕ್ಕೆ ನಾವು ಫ್ರೀ ಲೈಸೆನ್ಸ್ ಕೊಟ್ಟ ಹಾಗೆ ಆಗುತ್ತದೆ. ಇವತ್ತು ಯಾವುದೇ ವಿಚಾರ ಇರಬಹುದು. ಕೆಲವು ವಿಚಾರದಲ್ಲಿ, ನಾವು ಭುಷ್ಟಾಚಾರದ ಬಗ್ಗೆ ಹಲವಾರು ಆಪಾದನೆಗಳನ್ನು ಮಾಡುತ್ತಿದ್ದೇವೆ.

ಅಧ್ಯಕ್ಷರು:- ಈ ಮಾತಿನ ಕಾರಣದಿಂದಾಗಿ ಯಾರಾದರೂ ಹಣ ಕೊಟ್ಟಿರತಕ್ಕವರು ಇದ್ದರೆ, ಸಾಕ್ಷ್ಯಾಧಾರಗಳು ಇದ್ದರೆ ಅವರು ತೆಗೆದುಕೊಂಡು ಬಂದರೆ ಪುನ: ಆಲೋಚನೆ ಮಾಡೋಣ. As of now, I have no evidence with me. I had made remark. I have no go, but to withdraw it.

ಶ್ರೀ ವಾಟಾಳ್ ನಾಗರಾಜ್:- ಬಹುತೇಕ ಕಳ್ಳತನದಲ್ಲಿ ನಡೆಸತಕ್ಕಂಥ ಭ್ರಷ್ಟ ಶಾಲೆಗಳಲ್ಲಿ ಸಾಕ್ಷ್ಯಾಧಾರಗಳು ಇರುವುದಿಲ್ಲ. ಅವರೆಲ್ಲಾ ಬಹಳ ದೊಡ್ಡ ದೊಡ್ಡ ಮನುಷ್ಯರ ತರಹ ಇರುತ್ತಾರೆ. ಅಲ್ಲಿಗೆ ಹೋಗತಕ್ಕ ದೊಡ್ಡಮನಷ್ಯರ ಮಕ್ಕಳಿಗೆ ಓದಿಸುತ್ತಾರೆ. ಸಾಮಾನ್ಯ ಜನರು ಯಾರೂ ಅಲ್ಲಿ ಹೋಗುವುದಿಲ್ಲ. ತಮಗೆ ಹೇಳುತ್ತೇನೆ. ತಾವು ಇತಿಹಾಸದಲ್ಲಿ ನೋಡಿದ್ದೀರಿ. ಹತ್ತಾರು ವರ್ಷಗಳ ಕಾಲ ನೋಡಿದ್ದೀರಿ.

ಅಧ್ಯಕ್ಷರು:- ನಾವು ಈ ದೇಶದಲ್ಲಿರತಕ್ಕಂಥ ವ್ಯವಸ್ಥೆಗೆ ಹೊಂದಿಕೊಂಡೇ ಬದುಕಬೇಕಾಗುತ್ತದೆ.

ಶ್ರೀ ಬಿ ಬಿ. ಶಿವಪ್ಪ:- ಸಾಕ್ಷ್ಯಾಧಾರಗಳನ್ನು ಒದಗಿಸಿದರೂ ಕೂಡ ಆ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿಗೆ ಅವಕಾಶ ಇರುವುದಿಲ್ಲ. ಅವರಿಗೆ ತೊಂದರೆ ಆಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಖಾಸಗಿ ವಿದ್ಯಾಸಂಸ್ಥೆಗಳವರು ವ್ಯವಸ್ಥಿತವಾಗಿ ಸಾಕ್ಷ್ಯಾಧಾರಗಳನ್ನು ಇಲ್ಲದ ರೀತಿಯಲ್ಲಿ ಮಾಡುತ್ತಾರೆ.

ಅಧ್ಯಕ್ಷರು:- ತಮ್ಮ ಅಭಿಪ್ರಾಯಗಳಿಗೆ ತಾವು ಅರ್ಹರು. ಈ ವಿಚಾರವನ್ನು ಇಲ್ಲಿಯೇ ಮುಕ್ತಾಯ ಮಾಡೋಣ.

ಶ್ರೀ ವಾಟಾಳ್ ನಾಗರಾಜ್:- ಸಾಕ್ಷ್ಯಾಧಾರಗಳನ್ನು ಒದರಿಸುವುದಕ್ಕೆ ಆಗುವುದಿಲ್ಲ. ಒಂದು ರೀತಿ ತೆರೆಯ ಮರೆಯಲ್ಲಿ ನಡೆಯುತ್ತಿರತಕ್ಕಂಥ ದರೋಡೆ ಇದು. ಅನೇಕ ಶಾಲೆಗಳವರು ಹಗಲು ದರೋಡೆಗಳನ್ನು ನಡೆಸುತ್ತಾರೆ. ಬಡವರ ಮಕ್ಕಳು ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ. ಇಂತಹ ದೊಡ್ಡ ದೊಡ್ಡ ಹೆಸರಿನಲ್ಲಿ ನಡೆಸುತ್ತಿರುವಂತಹ...

ಅಧ್ಯಕ್ಷರು:- ಪತ್ರಿಕೆಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. Tyr to explain my position. Say that I am not committing that mistake.

ಶ್ರೀ ಜಿ ವಿ ಶ್ರೀರಾಮರೆಡ್ಡಿ:- ತಾವು ಈ ರೀತಿ ವಿಷಾದ ವ್ಯಕ್ತಪಡಿಸುವುದರಿಂದ ರಾಂಗ್ ಸಿಗ್ನಲ್ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಈ ಸಭೆಯ ಅಧ್ಯಕ್ಷರಾಗಿ ತಾವು ಆ ರೀತಿ ಹೇಳಿಬಿಟ್ಟರೆ ಅವರಿಗೆ ದೊಡ್ಡದಾಗಿ ಅರ್ಹತಾ ಪತ್ರವನ್ನು ಕೊಟ್ಟ ಹಾಗೆ ಆಗುತ್ತದೆ. ಏನು ಬೇಕಾದರೂ ಅವರು ಈ ರಾಜ್ಯದಲ್ಲಿ ಮಾಡಬಹುದು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ: ಅರ್ಹತಾ ಪತ್ರ ಅವರಿಗೆ ಕೊಟ್ಟ ಹಾಗೆ.. ಲೈಸೆನ್ಸ್ ಕೊಟ್ಟ ಹಾಗೆ ಆಗುತ್ತದೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ:- ನನಗೆ ಅನ್ನಿಸುತ್ತದೆ, ಒಳ್ಳೆಯ ಕೆಲಸ ತಾವು ಮಾಡಿದ್ದೀರಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಈಗ ತಮಗೆ ಗೊತ್ತಿದೆ. ವೈದ್ಯಕೀಯ ಕಾಲೇಜು, ತಾಂತ್ರಿಕ ಕಾಲೇಜುಗಳಲ್ಲಿ ಕ್ಯಾಪಿಟೇಷನ್ ವಸೂಲಿ ಮಾಡಿದ ಹಾಗೆ...

ಅಧ್ಯಕ್ಷರು:- ನಾವು ಆ ವಿಷಯವನ್ನು ಕ್ಲೋಸ್ ಮಾಡುತ್ತಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಎಲ್ಲದಕ್ಕೂ ನೀವು ಜನರಲೈಸ್ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲಾ ಸ್ಕೂಲಿಗೂ- ಜನರಲೈಸ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಒಂದೊಂದಕ್ಕೆ ಕ್ಯಾಪಿಟೇಷನ್ ಶುಲ್ಕ 20 ಲಕ್ಷ, 30 ಲಕ್ಷ ವಸೂಲಿ ಮಾಡುತ್ತಾರೆ.

ಅಧ್ಯಕ್ಷರು:- ನಾವು ಬೇರೆ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ ಎಲ್ಲಾ ಸ್ಕೂಲ್‌ಗಳನ್ನು ಜನರಲೈಸ್ ಮಾಡುವುದಕ್ಕೆ ಆಗುವುದಿಲ್ಲ. ಪೂರ್ಣ ಪ್ರಜ್ಞ ಸ್ಕೂಲಿನಲ್ಲಿ ನನಗೂ ಕೂಡ ಅನುಭವ ಇದೆ. ಯಾವ ಕಾರಣಕ್ಕೂ ಕೂಡ ಯಾವುದರಲ್ಲೂ ಡೊನೇಷನ್ ತೆಗೆದುಕೊಂಡಿಲು. ನಮ್ಮ ಮಕ್ಕಳೂ ಹೋಗುತ್ತಿದ್ದಾರೆ. ಇವತ್ತಿನವರೆಗೂ ಕೇಳಿದ್ದು ನಾನು ನೋಡಿಲ್ಲ. ಬಹಳ ಒಳ್ಳೆಯ ಸ್ಕೂಲು ಎಂದು ಹೆಸರು ಪಡೆದುಕೊಂಡು ಬಂದಿದೆ; ಪೂರ್ಣಪ್ರಜ್ಞ ಆದ್ದರಿಂದ ದಯವಿಟ್ಟು ಎಲ್ಲಕ್ಕೂ ಜನರಲೈಸ್ ಮಾಡುವುದರಲ್ಲಿ ಅರ್ಥ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಾನೇ ಒಂದು ಸಾರಿ ಒಬ್ಬರಿಗೆ ಹೇಳುವುದಕ್ಕೆ ಹೋದಾಗ ಅವರು ಏನು ಹೇಳಿದರು ನಿಮಗೆ ಗೊತ್ತಿಲ್ಲ. ರಾಜ್ಯಪಾಲರಿಂದ ಪತ್ರ ಬಂತು. ಆ ಪತ್ರವನ್ನು ಬುಟ್ಟಿಗೆ ಹಾಕಿದ್ದೇವೆಂದು. ನಾನು ನೇಕವಾಗಿ ಅವರಿಗೆ ಹೇಳಿದೆ. ರಾಜ್ಯಪಾಲರ ಪತ್ರವನ್ನು ಬುಟ್ಟಿಗೆ ಹಾಕುವ ಮಟ್ಟದಲ್ಲಿದ್ದೀರಾ ಎಂದು ಕೇಳಿದೆ. ಅಂದರೆ ಇಷ್ಟು ಉದ್ದಟತನದಿಂದ ಮಾತನಾಡುತ್ತಾರೆ. ಇಂತಹ ಶಾಲೆಗಳ ಲಿಸ್ಟ್ ಕೊಡುತ್ತೇನೆ ನಿಮಗೆ. ಈ ರಾಜ್ಯದಲ್ಲಿ ಇದೊಂದು ದೊಡ್ಡ ಕಳ್ಳತನದ ವ್ಯವಹಾರ ನಡೆಯುತ್ತಿದೆ.

ಶ್ರೀ ಜಿ.ಎ ಶ್ರೀರಾಮರೆಡ್ಡಿ: ಒಬ್ಬರ ಅನುಭವ ಆಗಿರಬಹುದು. ಅವರಿಗೂ ಆತ್ಮೀಯತೆ ಇರಬಹುದು.

ಅಧ್ಯಕ್ಷರು:- ಶ್ರೀಮತಿ ಪ್ರಮೀಳಾ ಅವರಿಗೆ ಹೇಳುತ್ತೇನೆ. ನಾನು ಹೇಳಿರತಕ್ಕ ಮಾತನ್ನು ಮತ್ತೊಮ್ಮೆ ಪುನರುಚ್ಚಾರ ಮಾಡುತ್ತೇನೆ. ಸಾಕ್ಷ್ಯಾಧಾರಗಳು ನನ್ನಲ್ಲಿ ಇಲ್ಲದೇ ಆರುವುದರಿಂದ ಆ ಮಾತನ್ನು ನಾನು ಹೇಳಿದ್ದರಿಂದ ನಾನು ವಿಷದವನ್ನು ವ್ಯಕ್ತಪಡಿಸುತ್ತೇನೆ. ಅರ್ಥ ಆಯಿತಾ? ಉಳಿದಿದ್ದರಿಂದ ಯಾರಾದರೂ ಕೊಟ್ಟವರಿದ್ದರೆ, ತೆಗೆದುಕೊಂಡವರಿದ್ದರೆ let them suffer from that guilt conscious. But I don't want to suffer from that guilt conscious. I have made the position very clear. We will go to the next subject.

- - -

(4) ಗಮನ ಸೆಳೆಯುವ ಸೂಚನೆ

ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ನೀಡುವ ಸಹಾಯಧನವನ್ನು ನಿಲ್ಲಿಸಿರುವುದರ ಬಗ್ಗೆ